**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 588/2025**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ**
**// ವಿರುದ್ದ //**
**ಆರೋಪಿ ಃ ಮಹಾದೇವಪ್ಪ**

**ಆಪಾದನೆ**

ನಾನುಃ **ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ** ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಗಳಾದ

| | |
|---|---|
| ಆರೋಪಿ 1. | ಮಹಾದೇವಪ್ಪ ತಂದೆ ನರಸಪ್ಪ ಕವಲಿ, ವಃ 64 ವರ್ಷ, |
| 2. | ನಾಗರಾಜ ತಂದೆ ಮರೆಪ್ಪ @ ಮರಗಪ್ಪ ಕವಲಿ, ವಃ 35 ವರ್ಷ, |
| 3. | ಮರಲಿಂಗಪ್ಪ ತಂದೆ ಹಣಮಂತ ಕವಲಿ, ವಃ 34 ವರ್ಷ, |
| | ಸಾಬಮ್ಮ ಗಂಡ ಹಣಮಂತ ಕವಲಿ, ವಃ 53 ವರ್ಷ,<br>ಎಲ್ಲರೂ ಸಾಃ ಮುಂಡರಗಿ ಗ್ರಾಮ.<br>ತಾಃ ಜಿಃ ಯಾದಗಿರಿ. |

**ನಿಮ್ಮ ವಿರುದ್ಧ ದೋಷಿಸುವ ಆಪಾದನೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 29-11-2024 ರಂದು ಮಃ 12-45 ಗಂಟೆಗೆ ಯಾದಗಿರಿ (ಗ್ರಾ) ಪೋಲಿಸ್ ಠಾಣೆ ಸರಹದ್ದಿಲ್ಲಿ ಬರುವ ಮುಂಡರಗಿ ಗ್ರಾಮದಚಾಸಾಃ1 ರವರ ಜಾಗದಲ್ಲಿ ಮನೆ ಕುಟ್ಟತ್ತಿರುವಾಗ ಮನೆ ಕಟ್ಟಬೆಡ ನಿಮ್ಮ ಜಾಗದಲ್ಲಿ ಮನೆ ಕಟ್ಟಿಕೊ ಅಂತಾ ಹೇಳಿದ್ದಕೆ 1 ನೇ ಆರೋಪಿಯಾದ ನೀನು ಲೇ ಸೂಳೆ ಮಕ್ಕಳೆ ನಾನಮ

ನಿಮ್ಮ ಜಾಗಕ್ಕೆ ರೊಕ್ಕ ಕೊಟ್ಟಿದೆನು ಮತ್ತೆ ಯಾಕೆ ಇಲ್ಲಿಗೆ ಬಂದಿರಿ ರಂಡಿ ಸೂಳೆ ಮಕ್ಕಳೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ನೀವು ಭಾ.ದಂ.ಸಂ. 352 ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ 1ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಲಂಗಾ ಸೂಳೆ ಮಕ್ಕಳೆ ಅಂತಾ ಅಂದು ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 74 ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ 1ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದಿದ್ದು, 1 ರಿಂದ 3 ನೇ ಆರೋಪಿತರಾದ ನೀವು ಚಾಸಾಃ4 ರವರಿಗೆ ಕೈಯಿಂದ ಹೊಡೆದಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 115(2) ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಚಾಸಾಃ1 ಮತ್ತು 4 ರವರನ್ನು ಲೇ ಸೂಳೆ ಮಕ್ಕಳೆ ಈ ಜಾಗದ ತಂಟೆಗೆ ಬಂದರೆ ನಿಮಗೆ ಖಲಾಸ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 351(2) ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 29-08-2025**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು ಯಾದಗಿರಿ.**